doc-393
T.P-2

(1)

R No KRNN 12 ಶ್ರೀ 2-11-1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★★★★★ 58 th Year ನೇ ವರ್ಷ

ಸತ್ಯವಾದಿ SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಸ್ವಾಮಿಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಶ್ರೀ ಪಾಂಡಿತ ಎಂ. ಎಸ್. ಕೃಷ್ಣರಾವ್ 8 ಪುಟ

ಕಾರ್ಡುದಾರರಿಗೆ ಗುಲ್ಬರ್ಗಾ ಜಿಲ್ಲಾಧಿಕಾರಿಗಳ ಎಚ್ಚರಿಕೆ

ವಜ್ರಗಳನ್ನು ವಶಕ್ಕೆ ತೆಗೆದುಕೊಳ್ಳಲಾಯಿತು

ಬೊಂಬಾಯಿನ ವಜ್ರ ರಫ್ತುಗಾರನ ನಿವಾಸವನ್ನು ಆದಾಯ ತೆರಿಗೆ ಅಧಿಕಾರಿಗಳು ರಾತ್ರಿಯೆಲ್ಲ ಶೋಧಿಸಿ ರೂ. 66 ಲಕ್ಷ ಬೆಲೆಯ ವಜ್ರಗಳನ್ನು ವಶಕ್ಕೆ ತೆಗೆದು ಕೊಂಡರು

ಕರ್ನಾಟಕ ಸರ್ಕಾರ

ಕಬಿನಿ ಜಲಾಶಯ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿ,
ಕಬಿನಿ ಕಾಲೋನಿ, ಹೆಚ್. ಡಿ. ಕೋಟೆ ತಾಲ್ಲೂಕು

11 ಕಾಲ್

ಟೆಂಡರ್ ಪ್ರಕಟಣೆ ನಂ. 10/74-75.

ದಿ. 21-10-74

ಈ ಕೆಳಗೆ ಸೂಚಿಸಿರುವ ಕೆಲಸಗಳಿಗಾಗಿ ಕೆಲಸದ ಹೆಸರು ಬರೆದ ಪ್ರತ್ಯೇಕ ಮೊಹರಾದ ಶೇಕಡಾವಾರು ಟೆಂಡರ್‌ಗಳು ದ್ವಿಪ್ರತಿಗಳಲ್ಲಿ 3 ಮತ್ತು ಮೇಲ್ಪಟ್ಟ ವರ್ಗದ ರಿಜಿಸ್ಟರ್ ಆದ ಕಂಟ್ರಾಕ್ಟರ್‌ಗಳಿಂದ ಕಬಿನಿ ಕಾಲೋನಿಯಲ್ಲಿರುವ, ಕಬಿನಿ ಜಲಾಶಯ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ ಆಹ್ವಾನಿಸಲ್ಪಟ್ಟಿದೆ

ಪ್ರತಿ ಏಟಿಂ ಕೆಲಸಕ್ಕೆ ರೂ 5/- ಪಾವತಿ ಮಾಡಿದಕ್ಕೆ ಕಚೇರಿ ಕೆಲಸದ ವೇಳೆಗಳಲ್ಲಿ 4-11-74 ರಿಂದ 6-11-74 ರ ವರೆಗೆ (ಎರಡು ದಿನಗಳು ಸೇರಿ) ಅನೇಕ್ಷಿಸುವ ಟೆಂಡರ್‌ದಾರರಿಗೆ ಖಾಲಿ ಟೆಂಡರ್ ಫಾರಂಗಳು ಕೊಡಲಾಗುವುದು ಮತ್ತು ವಿಭಾಗ ಕಚೇರಿಯಲ್ಲಿ 8-11-74 ರ ಮಧ್ಯಾಹ್ನ 4 ಗಂಟೆ ವರೆಗೆ ಮೊಹರಾದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು ಮತ್ತು ಅವನ್ನು ಹಾಜರಿರುವ ಕಂಟ್ರಾಕ್ಟರರುಗಳ ಮುಂದೆ ಅದೇ ದಿನ ಅಥವಾ ಯಾವುದಾದರೂ ಇತರ ಅನುಕೂಲವಾದ ತಾರೀಖುಗಳಲ್ಲಿ ಒಡೆಯಲಾಗುವುದು

ಈ ಕೆಳಗೆ ಪ್ರತಿ ಕೆಲಸದ ಎದುರು ಸೂಚಿಸಿರುವ ಅಗತ್ಯವಾದ ಇ. ಎಂ ಡಿ. ಟೆಂಡರ್‌ನೊಡನೆ ಇರಬೇಕು ಕೆಲಸ ಮುಗಿಸಲು ಕಾಲಾವಧಿ 12 ತಿಂಗಳುಗಳು.

ಕಚೇರಿ ಕೆಲಸದ ವೇಳೆಗಳಲ್ಲಿ ಕೆಲಸದ ಎಲ್ಲ ದಿನಗಳಲ್ಲಿ ವಿಭಾಗ ಕಚೇರಿಯಲ್ಲಿ ಇತರ ವಿವರಗಳನ್ನು ಪಡೆಯಬಹುದು.

ಸೀ ಹೆಂ	ಕೆಲಸದ ಹೆಸರು	ಟೆಂಡರ್‌ಗೆ ಇಟ್ಟಿರುವ ನೊತ್ತ ರೂ	ಅರ್ನೆಸ್ಟ್ ಹಣ ಠೇವಣಿ ರೂ
1	ತಾರಕ ನಾಲೆ ಸಬ್ ಡಿವಿಜ್ ಸ್ಟಾಫ್‌ಗೆ ಹೆಚ್. ಡಿ. ಕೋಟೆಯಲ್ಲಿ ಅಧಿಕೃತ ಕ್ವಾರ್ಟರ್ಸ್ ನಿರ್ಮಿಸುವುದು (ಬ್ಲಾಕ್ 1)	39,856/-	1,000/-
2	ತಾರಕ ನಾಲೆ ಸಬ್ ಡಿವಿಜ್ ಸ್ಟಾಫ್‌ಗೆ ಹೆಚ್. ಡಿ. ಕೋಟೆಯಲ್ಲಿ ಅಧಿಕೃತ ಕ್ವಾರ್ಟರ್ಸ್ ನಿರ್ಮಿಸುವುದು (ಬ್ಲಾಕ್ 2)	39.856/-	1,000/-

ಸಹಿ/- ಎ ಪಾಪಣ್ಣ
ಎಕ್ಸಿಕ್ಯುಟೀವ್ ಇಂಜಿನಿಯರ್

ಇಂದಿರಾ-ಜಯಪ್ರಕಾಶ ಮಾತುಕತೆ ವಿಫಲ

ನವದೆಹಲಿ— ಮೊದಲೇ ಗೊತ್ತುಪಡಿಸಿದ್ದ, 90 ನಿಮಿಷಗಳ ಮಾತುಕತೆ ನಿನ್ನೆ ಪ್ರಧಾನಿ ಇಂದಿರಾರು ಮತ್ತು ಸರ್ವೋದಯ ನಾಯಕ ಶ್ರೀ ಜಯಪ್ರಕಾಶ ನಾರಾಯಣರಿಗೂ ನಡೆಯಿತಾದರೂ, ಬೀಹಾರು ಶಾಸನಸಭೆ ವಿಸರ್ಜನೆ ಬಗ್ಗೆ ಇಬ್ಬರಲ್ಲೂ ಒಪ್ಪಿತವಾಗದೆ ವಿಫಲಗೊಂಡಿತು – ಜಯಪ್ರಕಾಶರು, ಬೀಹಾರು ರಾಜ್ಯದಲ್ಲಿಯ ನವೆಂಬರ್ 4 ರ ಯೋಜಿತ ಬಂದ್ ಮತ್ತು ಇತರ ರಾಜ್ಯಗಳಲ್ಲಿಯ ಬೆಂಬಲ ಕಾರ್ಯಗಳು ಹೆಚ್ಚು ಚೈತನ್ಯದಿಂದ ಆದರೆ ಶಾಂತಿಯುತವಾಗಿ ನಡೆಯುವುದೆಂದು ಹೇಳಿಕೆಯಲ್ಲಿ ತಿಳಿಸಿದರು – ಪ್ರಧಾನಿ ಇಂದಿರಾರು ಕೆಂಪು ಕೋಟೆಯಲ್ಲಿ ಭಾರಿ ಸಭೆಯಲ್ಲಿ ಮಾಡಿದ ಭಾಷಣದಲ್ಲಿ, ತಾವು ರಾಜೀನಾಮೆಯನ್ನಾದರೂ ಕೊಡುವೆನೇ ಹೊರತು, ಶಾಸನ ಸಭೆ ವಿಸರ್ಜನೆಗೆ ಒಪ್ಪುವುದಿಲ್ಲವೆಂದು ಹೇಳಿದರು.

★

ಅರ್ಧಂಬರ್ಧ ಹರತಾಳ

ಬೆಳಗಾಂ— ಮಹಾರಾಷ್ಟ್ರ ಏಕೀಕರಣ ಸಮಿತಿ ಕೊಟ್ಟಿದ್ದ ಕರೆಯಂತೆ ನಿನ್ನೆ ಹರತಾಳವು ಅರ್ಧಂಬರ್ಧ ನಡೆಯಿತು – ಮೆರವಣಿಗೆ ನಡೆಯುತ್ತಿರುವಾಗ ಸೈಕಲ್ ಮೇಲೆ ತಡೆಯಾಗಿರುವುದನ್ನು ಪ್ರತಿಭಟಿಸಿ ಈರಾಷ್ಟ್ರ

★

ನಗರದಲ್ಲಿ ರಾಜ್ಯೋತ್ಸವ

ಮೈಸೂರು— ರಾಜ್ಯೋತ್ಸವದಲ್ಲಿ ವಿಭಾಗಾಧಿಕಾರಿ ಶ್ರೀ ಸ್ಯಾಮ್ಯೂಲ್ ಅ ಸ್ವಾ ಜಿ ಅವರು ಮಾತನಾಡುತ್ತಾ, ಕನ್ನಡಿಗರು ಕರ್ನಾಟಕದ ಪ್ರಗತಿಗೆ ಶ್ರಮಿಸಲು ಕರೆಕೊಟ್ಟರು ; ಸರಕಾರ ಕನ್ನಡದ ಪ್ರೋತ್ಸಾಹಕ್ಕೆ ಕೈಗೊಂಡಿರುವ ಕಾರ್ಯಗಳನ್ನು ವಿವರಿಸಿದರು – ಮುನಿಸಿಪಲ್ ಕಮಿಷನರ್ ಶ್ರೀ ಸ್ವತಂತ್ರರಾವ್‌ರವರು ಸಭಿಕರಿಗೆ ಸ್ವಾಗತ ನೀಡಿದರು.

★

ರಾಜ್ಯೋತ್ಸವ

ಬೆಂಗಳೂರು— 18 ನೇ ಕರ್ನಾಟಕ ರಾಜ್ಯೋತ್ಸವವು ವೈಭವವಾಗಿ ಆಚರಿಸಲಾಯಿತು – ಮುಖ್ಯಳ ನೋಳನವಿತ್ತು – ಕಾಳೀನದಿ ಪ್ರಾಜೆಕ್ಟು ಮುಗಿಸಲ್ಪಡುವ ದೆಂದು ಮುಖ್ಯ ಮಂತ್ರಿಗಳು ಘೋಷಿಸಿದರು – ರಾಜ್ಯದ 11 ಪ್ರಮುಖರಿಗೆ ಅವರು ವಿವಿಧ ಕಾರ್ಯಕ್ಷೇತ್ರಗಳಲ್ಲಿ ನೆರವೇರಿಸಿರುವ ಯಶಸ್ವಿ ಸೇವೆಗಾಗಿ ಸಾಂತೋಷಪತ್ರಗಳನ್ನು ಕೊಡಲಾಯಿತು – ಕನ್ನಡ ಚಳುವಳಿಗಾರರೂ ಸಮಾರಂಭಗಳನ್ನು ಏರ್ಪಡಿಸಿದ್ದರು – ವಿಧಾನ ಸೌಧದ ಮುಂದೆ ಏರ್ಪಡಿಸಿದ್ದ ಭಾರಿ ಸಮಾರಂಭದಲ್ಲಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರನ್ನು ಗೌರವಿಸಿ ಅವರಿಗೆ ಹೂವಿನ ಕಿರೀಟ ಇಟ್ಟರು.

★

ಶ್ರೀ ಅರಸ್ ರವರ ರಾಜ್ಯೋತ್ಸವ ಸಂದೇಶ

ಬೆಂಗಳೂರು— ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಇತ್ತ ರಾಜ್ಯೋತ್ಸವ ಸಂದೇಶದಲ್ಲಿ, 18 ವರ್ಷಗಳಿಂದ ಆಗಿರುವ ಮಹತ್ಕಾರ್ಯಗಳನ್ನು ತಿಳಿಸಿ, ಈಗಿನ ಪರಿಸ್ಥಿತಿ ವಿವರಿಸಿ, ಗುರಿ ಸಾಧಿಸಲಾಗುವುದೆಂದು ಹೇಳಿ, ಕನ್ನಡ ಜನತೆಗೆ ಶುಭಾಶಯ ಕೋರಿರುವರು.

★

ಅಕ್ಕಿ ಬೆಲೆ ತಗ್ಗಿತು

ಕಾರವಾರ– ಉತ್ತರ ಕನ್ನಡ ಜಿಲ್ಲೆಯ ಬಹಿರಂಗ ವ್ಯಾಪಾರಿಕಟ್ಟೆಗಳಿಗೆ ಸರಕಾರ ಪಡೆದಿರುವ 2500 ಕ್ವಿಂಟಾಲು ಭತ್ತವನ್ನು ವ್ಯಾಪಾರಿಗಳು ಜಿಲ್ಲಾಧಿಕಾರಿಗಳು ಅನುಮತಿ ಕೊಟ್ಟದ್ದರಿಂದ ಅಕ್ಕಿ ಬೆಲೆ ತಗ್ಗಿತು.

●

ಕಾರ್ಡುದಾರರಿಗೆ ಎಚ್ಚರಿಕೆ

ಗುಲ್ಬರ್ಗ– ನ್ಯಾಯಬೆಲೆ ಅಂಗಡಿಯಿಂದ ಕೊಂಡ ಸಕ್ಕರೆ ಮತ್ತು ಅಹಾರಧಾನ್ಯಗಳನ್ನು ಇತರರಿಗೆ ಮಾರಿದರೆ ತೀವ್ರ ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಮಂತ್ರಿಯುವಕ ರಾಜೀನಾಮೆ

ಲಕ್ನೋ— 6.5 ಎಕ್ರೆ ಭೂಮಿಯ ಮೇಲೆ, ಪುನಃ ಭೂ ಕಂದಾಯ ವಿಧಿಸುವುದನ್ನು ಪ್ರತಿಭಟಿಸಿ, ಉತ್ತರ ಪ್ರದೇಶದ ಆರೋಗ್ಯ ಮಂತ್ರಿಯುವರು ರಾಜೀನಾಮೆ ಕೊಟ್ಟರು; ಸರಕಾರ ಕಾಂಗ್ರೆಸ್ ನೀತಿಯುಕ್ತ ಉಲ್ಲಂಘಿಸಿದೆಯೆಂದು ಆರೋಪಿಸಿದರು

ಜಾತಿಪದ್ಧತಿಯಿಂದ ಸಮಾಜವಾದಕ್ಕೆ ಆತಂಕವಂತೆ

ಕಲ್ಕತ್ತಾ— ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಶ್ರೀ ಸಿದ್ಧಾರ್ಥ ರೇಯವರು ಅಕ್ಟೋಬರ್ 2 ರಂದು ಗಾಂಧೀ ಜಯಂತಿಯಂದು ಮಾಡಿದ ಭಾಷಣದಲ್ಲಿ— ದೇಶದಲ್ಲಿ ಜಾತಿಪದ್ಧತಿ ಮತ್ತು ಅಸ್ಪೃಶ್ಯತೆ ಇರುವ ವರೆಗೆ ಸಮಾಜವಾದ ಸರಲಾಗುವುದಿಲ್ಲವೆಂದು ಹೇಳಿದರು ಬಹಿರಂಗ ದುರ್ಗಾಪೂಜೆಯಲ್ಲಿ ಯಾರಾದರೂ ವ್ಯವಸ್ಥಾಪಕರು ಒಬ್ಬ ಹರಿಜನ ಪೂಜಾರಿಯನ್ನು ನೇಮಿಸಿದಲ್ಲಿ ತಾವು ಅವರಿಗೆ ಮುಖ್ಯ ಮಂತ್ರಿ ನಿಧಿಯಿಂದ ವಿಶೇಷ ಪಾರಿತೋಷಕ ನೀಡುವುದಾಗಿ ತಿಳಿಸಿದರೆಂದು ಪ್ರಕಟವಾಗಿದೆ.

ಜಿಲ್ಲೆಯಲ್ಲಿ ಮಂತ್ರಿ ರಾಜಯ್ಯನವರ ಪ್ರವಾಸ

ರಾಜ್ಯದ ಗ್ರಾಮಾಂತರ ಅಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮಂತ್ರಿ ಶ್ರೀ ಎನ್. ರಾಜಯ್ಯನವರು ಈ ತಿಂಗಳ 5 ರಂದು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡುವರು ಅಂದು ಬೆಳಿಗ್ಗೆ ಮೈಸೂರು ತಾಲ್ಲೂಕಿನ ಹಡಜನ ಗ್ರಾಮದಲ್ಲಿ ಹರಿಜನ ಸಮ್ಮೇಳನದ ಉದ್ಘಾಟನ ಸಮಾರಂಭದಲ್ಲಿ ಭಾಗವಹಿಸುವರು.

ಕರ್ನಾಟಕ ಡೈರಿ ಅಭಿವೃದ್ಧಿ ಕಾರ್ಪೊರೇಷನ್

ಕರ್ನಾಟಕ ಡೈರಿ ಅಭಿವೃದ್ಧಿ ಕಾರ್ಪೊರೇಷನ್‌ಗೆ ವ್ಯವಸಾಯ ಹಾಗೂ ಪಶು ಸಂಗೋಪನಾ ಮಂತ್ರಿಯವರಾದ ಶ್ರೀ ಎನ್. ಚಿಕ್ಕೆಗೌಡರನ್ನು ಅಧ್ಯಕ್ಷರನ್ನಾಗಿ ಸರಕಾರ ನೇಮಿಸಿದೆ.

ದಿವ್ಯವಾಣಿ

ಒಂದು ಒಳ್ಳೆ ಪುಸ್ತಕವು ಮಿತ್ರರಲ್ಲಿ ಅತ್ಯುತ್ತಮವು, ಇಂದು ಮತ್ತು ಎಂದೂ.

— ಕೂಪರ್

Help The Gorakshana

— Humanitarian Propaganda Monthly—

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Quality Printing Neat Binding

Lakshminarasimha Press

Sivarampet, Mysore 1

Protect the Cow

ವುಡ್‌ಲಾಂಡ್

ಅಮೋಘ 7 ನೇ ವಾರ

ಇಮ್ತಿಹಾನ್ Imtihan

★ ತನುಜ ★ ವಿನೋದ ಖನ್ನ ★ ಬಿಂದು

ಅಭಿನಯಿಸಿರುವ ಅಮೋಘ ಹಿಂದಿ ವರ್ಣರಂಜಿತ ಕಲಾಕೃತಿ

ನಿರ್ದೇಶನ – ಮದನ್ ಸಿಂಹ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ 7 ಪ್ರದರ್ಶನಗಳು

ಅಪೆರಾ 1 11 74 ರಿಂದ

ರಾಜಕುಮಾರ್ ಕಲ್ಯಾಣ ಕುಮಾರ್

ಅಭಿನಯಿಸಿರುವ ಅಮೋಘ ಕನ್ನಡ ಚಿತ್ರ

ಭೂ ಕೈಲಾಸ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore